703(1162) : ಶ್ರೀ ಭರಮಗೌಡ (ರಾಜು) ಅಲಗೌಡ ಕಾಗೆ (ಕಾಗವಾಡ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2004–05ನೇ ಸಾಲಿನಲ್ಲಿ ಕಾಗವಾಡ ಮತ ಕ್ಷೇತ್ರದ ಎಷ್ಟು ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಅನುಮೋದನೆ ನೀಡಲಾಗಿದೆ; ಹಾಗೂ ಇತರ ತಾಲ್ಲೂಕುಗಳಿಗೆ ಈ ಯೋಜನೆಯಡಿ ನೀಡಿರುವ ಅನುಮೋದನೆಗಳ ವಿವರಗಳನ್ನು ಒದಗಿಸುವುದು;

ಆ) 2004–05ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿ ಕೊಳ್ಳಲಾಗಿದೆ(ವಿವರಗಳನ್ನು ತಾಲ್ಲೂಕುವಾರು ಒದಗಿಸುವುದು)?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ(ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವೆ ಸಚಿವರು)

ಅ) 2004–05ನೇ ಸಾಲಿನಲ್ಲಿ ಕಾಗವಾಡ ಮಠ ಕ್ಷೇತ್ರದಲ್ಲಿ ವೈಯಕ್ತಿಕ ಕೊಳವೆ ಬಾವಿ ಯೋಜನೆಯಡಿ 2 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಇದಲ್ಲದೇ 7 ಏತ ನೀರಾವರಿ ಯೋಜನೆಗೆ ಫಲಾನುಭವಿಗಳನ್ನು ತಾಲ್ಲೂಕು ಸಮಿತಿಯಿಂದ ಆಯ್ಕೆ ಮಾಡಲಾಗಿದೆ.

ಈ ಕೆಳಕಂಡ ತಾಲ್ಲೂಕುಗಳಿಗೆ ಗುರಿಯನ್ನು ನಿಗಧಿಪಡಿಸಿದ್ದು, ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಕೊಳವೆ ಬಾವಿಗಳನ್ನು ಕೊರೆಸಬೇಕಾಗಿದೆ.

ತಾಲ್ಲೂಕು ಗಂಗಾ ಕಲ್ಯಾಣ ಯೋಜನೆ

	ವೈ.ಕೊ.	ಸಾ.ಕೊ.
ಅಥಣಿ	4	–
ಚಿಕ್ಕೋಡಿ	4	–
ರಾಯಭಾಗ	2	–
ಹುಕ್ಕೇರಿ	4	–
ಗೋಕಾಕ್	2	–
ಬೈಲಹೊಂಗಲ	2	–
ಸವದತ್ತಿ	2	–
ರಾಮದುರ್ಗ	2	–
ಖಾನಾಪುರ	2	1
ಬೆಳಗಾವಿ	2	–
ಒಟ್ಟು	26	1

ಆ) 2004–05ನೇ ಸಾಲಿನಲ್ಲಿ ಅಲ್ಪ ಸಂಖ್ಯಾತ ಅಭಿವೃದ್ಧಿ ನಿಗಮದಿಂದ ಕೈಗೊಂಡ ಯೋಜನೆಗಳ ತಾಲ್ಲೂಕು ವಾರು ವಿವರ ಈ ಕೆಳಗಿನಂತಿದೆ :

ತಾಲ್ಲೂಕು	ಸ್ಥಾವ ಲಂಬನಾ ಸಾಲ	ಅರಿವು ಸಾಲ	ಗಂಗಾಕಲ್ಯಾಣ ಯೋಜನೆ	
			ಮೈಕೊ	ಸಾಕೊ
ಅಥಣಿ	3	2	4	–
ಚಿಕ್ಕೋಡಿ	8	5	4	–
ರಾಯಬಾಗ್	6	1	2	–
ಹುಕ್ಕೇರಿ	6	–	4	–
ಗೋಕಾಕ್	4	–	2	–
ಬೈಲಹೊಂಗಲ	–	1	2	–
ಸವದತ್ತಿ	4	–	2	–
ರಾಮದುರ್ಗ	5	2	2	–
ಖಾನಾಪುರ	7	–	2	1
ಬೆಳಗಾವಿ	35	1	2	–
ಒಟ್ಟು	78	12	26	1

704(1163) ಶ್ರೀ ಭರಮಗೌಡ (ರಾಜು) ಅಲಗೌಡ ಕಾಗೆ (ಕಾಗವಾಡ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜೀವರ್ಗಿ–ಸಂಕೇಶ್ವರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯು ಯಾವ ಹಂತದಲ್ಲಿದೆ;

ಆ) ಕಾಗವಾಡದಿಂದ ಚಿಕ್ಕೋಡಿಯವರೆಗೆ ರಸ್ತೆ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸದರಿ ಕಾಮಗಾರಿಯನ್ನು ಆದಷ್ಟು ತೀವ್ರಗತಿಯಲ್ಲಿ ಕೈಗೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಿಜಾಪುರದಿಂದ ಸಂಕೇಶ್ವರದವರೆಗಿನ ರಾಜ್ಯ ಹೆದ್ದಾರಿಯನ್ನು (ತಿಕೋಟಾ–ಅಥಣಿ–ಶೇಡ್‌ಬಾಳ್–ಚಿಕ್ಕೋಡಿ ಮೂಲಕ) ವಿಶ್ವಬ್ಯಾಂಕ್ ಸಾಲದ ನೆರವಿನಡಿಯಲ್ಲಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಿಂದ ಅಭಿವೃದ್ಧಿಗೊಳಿಸಲಾಗುತ್ತಿದೆ. ಬಿಜಾಪುರದಿಂದ ಸಂಕೇಶ್ವರದವರೆಗಿನ ರಸ್ತೆಯನ್ನು ನಾಲ್ಕು ಕಾಮಗಾರಿಗಳನ್ನಾಗಿ ಭಾಗ ಮಾಡಿದ್ದು ಒಟ್ಟು 150 ಕಿಮಿ. ಕಾಮಗಾರಿ ಭಾಗಶಃ ಮುಗಿದಿದೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಜೀವರ್ಗಿ–ಸಂಕೇಶ್ವರ ರಾಜ್ಯ ಹೆದ್ದಾರಿಯ ಜೀವರ್ಗಿಯಿಂದ–ಬಿಜಾಪುರವರೆಗಿನ 119.00 ಕಿಮೀ. ರಸ್ತೆಯ ಭಾಗದ ಅಗಲೀಕರಣ ಮತ್ತು ಬಲಪಡಿಸುವ ಕಾರ್ಯವನ್ನು ತೆಗೆದುಕೊಳ್ಳಲಾಗಿದೆ. ಈ 119.00 ಕಿಮೀ. ರಸ್ತೆಯ ಅಭಿವೃದ್ಧಿಯನ್ನು ನಾಲ್ಕು ಪ್ಯಾಕೇಜುಗಳಲ್ಲಿ ತೆಗೆದುಕೊಳ್ಳಲಾಗಿದೆ.